ಹಾಕಿದ ಒಟ್ಟು ಆರಂಭಿಕ ಬಂಡವಾಳ ಐದೂವರೆ ಲಕ್ಷ ರೂಪಾಯಿ.

ಗಿಡಗಳಿಗೆ ಸಾವಯವ ಗೊಬ್ಬರ ಮಾತ್ರ ಬಳಸುತ್ತಾರೆ. ಕಹಿಬೇವಿನ ಹಿಂಡಿ ವರ್ಷಕ್ಕೆ ಎರಡು ಬಾರಿ ಮೇ ಮತ್ತು ನವೆಂಬರ್ ಕೊನೆಗೆ ಅರ್ಧರ್ಧ ಕೆ.ಜಿ. ಪ್ರತಿ ಕಂಬಕ್ಕೆ; ಅದೇ ರೀತಿ ಹರಳಿಂಡಿ ಅರ್ಧರ್ಧ ಕೆ.ಜಿ. ಎರಡು ಬಾರಿ, ಕೋಳಿ ಗೊಬ್ಬರ ಒಂದೊಂದು ಬುಟ್ಟಿ ಮತ್ತು ದನದ ಸೆಗಣಿ ಒಂದೊಂದು ಬುಟ್ಟಿ ಎರಡು ಬಾರಿ (ಮೇ ಮತ್ತು ನವೆಂಬರ್); ಮಾರ್ಚ್ ಮತ್ತು ಆಗಸ್ಟ್‌ನಲ್ಲಿ ಯಾವುದೇ ಕಾಂಪೋಸ್ಟ್ ಗೊಬ್ಬರ ಎರಡೆರಡು ಕೆ.ಜಿ. ಕೊಡುತ್ತಾರೆ.

'ಡ್ರ್ಯಾಗನ್ ಸಸಿ ನೆಟ್ಟ 8ನೇ ತಿಂಗಳಿನಿಂದ ಫಸಲು ಬಿಡಲು ಶುರುವಾಗುತ್ತದೆ. 4 ವರ್ಷದಲ್ಲಿ ನಾವು ಹಾಕಿದ ಬಂಡವಾಳ ವಾಪಸ್ ಬರುತ್ತದೆ. ಮಾರುಕಟ್ಟೆಯಲ್ಲಿ ಹಣ್ಣಿಗೆ ಯಾವಾಗಲೂ ಬೇಡಿಕೆ ಇದ್ದೇ ಇರುತ್ತದೆ. ಒಂದು ಕಂಬದಿಂದ 150 ಕೆ.ಜಿ. ಹಣ್ಣು ಸಿಗುತ್ತದೆ. ಕೆ.ಜಿ.ಗೆ 50 ರೂ. ಸಿಕ್ಕಿದರೂ ಒಂದು ಕಂಬದಿಂದ ಒಂದು ವರ್ಷಕ್ಕೆ 7500 ರೂಪಾಯಿ ಆದಾಯ ಪಡೆಯಬಹುದು. ಅಡಿಕೆಯಲ್ಲಿ ಒಂದು ಮರದಿಂದ ಹೆಚ್ಚೆಂದರೆ 3 ಕೆ.ಜಿ. ಅಡಿಕೆ ಪಡೆಯಬಹುದು. 3 ಕೆ.ಜಿ. ಅಡಿಕೆಗೆ ಕೇವಲ 1250 ರೂ. ಸಿಗುತ್ತದೆ' ಎನ್ನುವುದು ಅವರ ಅನುಭವದ ನುಡಿ.

ಹಣ್ಣಿನ ಬೆಲೆ ಎಲ್ಲ ಸಮಯದಲ್ಲೂ ಒಂದೇ ರೀತಿ ಇರುವುದಿಲ್ಲ. ವರ್ಷದ ಪ್ರಾರಂಭದಲ್ಲಿ ಬೆಲೆ ಜಾಸ್ತಿ. ಮಧ್ಯದಲ್ಲಿ ಕಡಿಮೆ ಆಗುತ್ತದೆ. ಹಣ್ಣಿನ ಸೀಸನ್ ಮುಗಿಯುತ್ತಾ ಬರುವಾಗ ಪುನಃ ಜಾಸ್ತಿ ಆಗುತ್ತದೆ. ಈ ವರ್ಷದ ಆರಂಭದಲ್ಲಿ ಅವರಿಗೆ ಕೆ.ಜಿ.ಗೆ 180 ರೂ. ಸಿಕ್ಕಿತ್ತು. ಆಮೇಲೆ 150 ರೂ.ಗೆ ಇಳಿಯಿತು. ಈಗ 160 ರೂ ಸಿಗುತ್ತಿದೆ.

'ಈಗ ಹಣ್ಣು ಕಡಿಮೆ ಇರುವುದರಿಂದ ಬೆಲೆ ಜಾಸ್ತಿ ಆಗುವ ಲಕ್ಷಣವಿದೆ. ಕೆ.ಜಿ.ಗೆ 190 ರೂ. ಸಿಗಬಹುದು. ಈ ವರ್ಷ ನನಗೆ 10 ಟನ್ ಫಸಲು ಬಂದಿದೆ. ಎಕರೆಗೆ ಸುಮಾರು ಎಂಟು ಲಕ್ಷ ರೂ. ಆದಾಯ ಲಭಿಸಿದೆ. ಹಾಕಿದ ಬಂಡವಾಳ ಬಂದಾಯಿತು. ಕಳೆದ ವರ್ಷ ಮೂರೂವರೆ ಟನ್ ಮಾರಿದ್ದೇನೆ. 5 ವರ್ಷದ ನಂತರ ಒಂದು ಎಕರೆಗೆ ಸುಮಾರು 13 ಟನ್ ಇಳುವರಿ ತೆಗೆಯಲಾಗುತ್ತದೆ' ಎನ್ನುವಾಗ ಅವರ ಮುಖದಲ್ಲಿ ಸಂತಸದ ಕಳೆ.



ಡ್ರ್ಯಾಗನ್ ಫ್ರೂಟನ್ನು ತಾರಸಿ ಮೇಲೆಯೂ ಬೆಳೆಯಬಹುದು. ಗೋಪಾಲಕೃಷ್ಣ ಅವರಿಂದ ಹಣ್ಣಿನ ಗಿಡಗಳನ್ನು ಕೊಂಡು ಚಟ್ಟಿಗಳಲ್ಲಿ ಮಣ್ಣು ತುಂಬಿಸಿ ತಾರಸಿಯಲ್ಲಿ ಮಂಗಳೂರಿನಲ್ಲಿ ಒಬ್ಬರು ಬೆಳೆದಿದ್ದಾರೆ. ಇದು ಮುಳ್ಳಿನಿಂದ ಕೂಡಿದ ಸಸ್ಯ. ಹಾಗಾಗಿ ಮಂಗ, ಬಾವಲಿ, ಕಾಡುಹಂದಿ, ನವಿಲು ಇತ್ಯಾದಿ ಪ್ರಾಣಿಗಳ ಹಾವಳಿ ಇಲ್ಲ. ರೋಗ–ಕೀಟ ಬಾಧೆ ಕಡಿಮೆ. ದ್ರಾಕ್ಷಿ, ದಾಳಿಂಬೆಗಳಂತೆ ರಾಸಾಯನಿಕ ಔಷಧಿ, ಕ್ರಿಮಿನಾಶಕಗಳನ್ನು ಇದು ಬೇಡುವುದಿಲ್ಲ. ಪ್ರತಿವರ್ಷ ನವೆಂಬರ್ ತಿಂಗಳಿನ ಕೊನೆಗೆ ಡಿಸೆಂಬರ್ ಶುರುವಿಗೆ ಬೋರ್ಡೋ ದ್ರಾವಣ (ಮೈಲುತುತ್ತು–ಸುಣ್ಣ ಮಿಶ್ರಣ) ಸ್ಪ್ರೇ ಮಾಡಿದರೆ ಮುಗಿಯಿತು.

ದ್ರಾವಣ ತಯಾರಿಸುವಾಗ 200 ಲೀಟರ್ ನೀರಿಗೆ 2 ಕೆ.ಜಿ. ಮೈಲುತುತ್ತು, 4 ಕೆ.ಜಿ. ಸುಣ್ಣ ಮಿಶ್ರಣ ಮಾಡಬೇಕು. ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ಹೊಸ ಚಿಗುರು ಬರಲು ಆರಂಭವಾಗುತ್ತದೆ. ಆಗ ಚಿಗುರು ಕೊಳೆಯದಿರಲು ಸ್ಪ್ರೇ ಬೇಕಾಗುತ್ತದೆ. ಆ ಸಮಯದಲ್ಲಿ ಹಣ್ಣು ಮುಗಿದಿರುತ್ತದೆ. ಮೇ ತಿಂಗಳಿನಲ್ಲಿ ಹಣ್ಣು ಬಿಡಲು ಆರಂಭವಾಗುತ್ತದೆ. ಅಕ್ಟೋಬರ್ ಕೊನೆ, ನವೆಂಬರ್ ಶುರುವಿನವರೆಗೂ ಸಿಗುತ್ತದೆ. ಜೂನ್–ಜುಲೈ ಹೆಚ್ಚು ಹಣ್ಣು ಸಿಗುವ ಕಾಲ. ಹೂ ಬಿಟ್ಟು ಸರಿಯಾಗಿ 28ನೇ ದಿನ ಫಸಲು ಕೊಯ್ಯಲು ರೆಡಿಯಾಗಿರುತ್ತದೆ. 27ನೇ ದಿನದವರೆಗೆ ಹಸಿರು ಬಣ್ಣದಲ್ಲಿರುತ್ತದೆ. 28ನೇ ದಿನ ಪಿಂಕ್ ಬಣ್ಣ ಬಂದಿರುತ್ತದೆ. ಒಂದು ತೊಟ್ಟಿನಲ್ಲಿ ಎರಡರಿಂದ ನಾಲ್ಕು ಹಣ್ಣು ಆಗುವುದೂ ಇದೆ.

'ಗಿಡದಿಂದ ಕಿತ್ತ ಹಣ್ಣು 63 ದಿನ ಉಳಿಯುತ್ತದೆ. ಒಂದು ಹಣ್ಣು ಒಂದು ತಿಂಗಳು ಹಾಳಾಗದೆ ಉಳಿಯುವುದಂತೂ ಗ್ಯಾರಂಟಿ' ಎನ್ನುವುದು ಅವರ ಸ್ಪಷ್ಟನುಡಿ. ಗೋಪಾಲಕೃಷ್ಣ ಅವರು ನೆಟ್ಟಿರುವುದು ಡ್ರ್ಯಾಗನ್ ಹಣ್ಣಿನ ಪ್ರಭೇದ ರಾಯಲ್ ರೆಡ್. ಕೆಂಪು ಬಣ್ಣದ್ದಾಗಿದ್ದು, ಸಿಪ್ಪೆ ಸುಲಿದರೆ ಥೇಟ್ ಬೀಟ್‌ರೂಟ್ ಬಣ್ಣದ ಮೆತ್ತಗಿನ ತಿರುಳು. ತಿರುಳಿನಲ್ಲಿ ಸಾಸಿವೆಯಂತಹ ಬೀಜಗಳು. ಸ್ಥಳೀಯ ಮಾರುಕಟ್ಟೆಯಲ್ಲಿ ಇವರು ಮಾರಾಟ ಮಾಡುವುದಿಲ್ಲ. ಹಣ್ಣುಗಳ ಕಟಾವಿನ ಕೆಲಸ ಮುಗಿಯುತ್ತಿದ್ದ ಹಾಗೆ ಕೊಚ್ಚಿಯ ಖರೀದಿದಾರರು ಬಂದು ಕೊಂಡೊಯ್ಯುತ್ತಾರೆ. ಅಲ್ಲಿಂದ ದುಬೈಗೆ ರಫ್ತಾಗುತ್ತದೆ.



ಒಂದು ಎಕರೆ ಡ್ರ್ಯಾಗನ್ ಹಣ್ಣಿನ ತೋಟವನ್ನು ಒಬ್ಬರೇ ನೋಡಿಕೊಳ್ಳಲು ಸಾಧ್ಯ. ಅಡಿಕೆ ತೋಟಕ್ಕಾದರೆ ಕೂಲಿಯಾಳು ಬೇಕು ಎನ್ನುವ ಗೋಪಾಲಕೃಷ್ಣ ಅವರ ಕೃಷಿ ಕೆಲಸಕ್ಕೆ ಮನೆಯವರೂ ಜೊತೆಯಾಗಿದ್ದಾರೆ.

ರಕ್ತಹೀನತೆ ಹೋಗಲಾಡಿಸಲು, ಪ್ಲೇಟ್‌ಲೆಟ್ ಹೆಚ್ಚಿಸಲು ಈ ಹಣ್ಣು ಸಹಕಾರಿ. ಇದರ ಸಿಪ್ಪೆಯಲ್ಲಿ ನಮ್ಮ ಚರ್ಮಕ್ಕೆ ಬೇಕಾದ ವಿಟಮಿನ್ ಇ ಮತ್ತು ಪ್ರೊಟೀನ್ ಅಂಶ ಹೆಚ್ಚಿದೆ. ಇದು ಕೊಲೆಸ್ಟ್ರಾಲ್ ಮುಕ್ತ ಹಣ್ಣು. ಕಡಿಮೆ ಸಿಹಿ ಹೊಂದಿರುತ್ತದೆ. ಶುಗರ್, ಬಿಪಿ ಇರುವವರೂ ತಿನ್ನಬಹುದು. ಹಣ್ಣನ್ನು ಹಾಗೆಯೇ ತಿನ್ನಬಹುದು, ತರಕಾರಿಯಂತೆ ಅಡುಗೆಯಲ್ಲೂ ಬಳಸಬಹುದು. ಸಿಪ್ಪೆಯಿಂದ ಪಲ್ಯ, ಗೊಜ್ಜು, ದೋಸೆ, ಇಡ್ಲಿ ಮಾಡಬಹುದು. ಗೋಧಿ ಹಿಟ್ಟಿಗೆ ನೀರಿನ ಬದಲು ಹಣ್ಣಿನ ತಿರುಳು ಸೇರಿಸಿ ಚಪಾತಿ ಮಾಡಿದರೆ ಬಲು ರುಚಿ. ತಿರುಳಿನಿಂದ ಜ್ಯೂಸ್, ಐಸ್‌ಕ್ರೀಂ ತಯಾರಿಸಬಹುದು.

ಗೋಪಾಲಕೃಷ್ಣ ಅವರು ಡ್ರ್ಯಾಗನ್ ಹಣ್ಣಿನ ಗಿಡಗಳನ್ನು ನರ್ಸರಿಗಿಂತ ಕಡಿಮೆ ದರದಲ್ಲಿ, ಅಂದರೆ ಒಂದು ತುಂಡಿಗೆ 100 ರೂ.ನಂತೆ ಮಾರಾಟ ಮಾಡುತ್ತಾರೆ. ಒಂದು ತುಂಡಿನಿಂದ 5 ಅಥವಾ 6 ಗಿಡಗಳನ್ನು ಮಾಡಬಹುದು. ಒಂದು ಗಿಡ 35 ವರ್ಷ ಬಾಳಿಕೆ ಬರುತ್ತದೆ. 'ಹಣ್ಣು ಮಾರಾಟ ಮಾಡಲಾಗದಿದ್ದರೂ ಆರೋಗ್ಯದ ದೃಷ್ಟಿಯಿಂದ ತಿನ್ನುವುದಕ್ಕಾಗಿಯಾದರೂ ಪ್ರತಿ ರೈತನ ಮನೆಯಲ್ಲೂ ನಾಲ್ಕೈದು ಡ್ರ್ಯಾಗನ್ ಹಣ್ಣಿನ ಗಿಡಗಳು ಇರಬೇಕು' ಎಂಬುದು ಅವರ ಆಶಯ.

**ಹೆಚ್ಚಿನ ಮಾಹಿತಿಗೆ: 9980249568**

**ಪ್ರತಿಕ್ರಿಯಿಸಿ: feedback@sudha.co.in**